ಸಂಖ್ಯೆ/ಎಚ್‌ಡಿಎಸ್‌ಸಿಎಲ್/ಪತ್ರಿಕಾ ಮಾಹಿತಿ/2017-18 ದಿನಾಂಕ : 14-11-2017

## ಪತ್ರಿಕಾ ಮಾಹಿತಿ

**ವಿಷಯ :** ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **14-11-2017** ಮಂಗಳವಾರ ರಂದು ಜನತಾ ಬಜಾರ ಹುಬ್ಬಳ್ಳಿಯಲ್ಲಿ ಜನತಾ ಬಜಾರ ಮಾರುಕಟ್ಟೆ ಅಭಿವೃದ್ದಿಯ ಯೋಜನೆಯ ಕುರಿತು ವ್ಯಾಪಾರಸ್ಥರು ಹಾಗೂ ನಾಗರೀಕರೊಂದಿಗೆ ಸಮಾಲೋಚನೆ ಸಭೆ ಸಂಘಟಿಸಿದ ಕುರಿತು ವರದಿ.

* * * * *

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **14-11-2017** ಮಂಗಳವಾರ ರಂದು ಜನತಾ ಬಜಾರ ಹುಬ್ಬಳ್ಳಿಯಲ್ಲಿ ಜನತಾ ಬಜಾರ ಮಾರುಕಟ್ಟೆ ಅಭಿವೃದ್ದಿಯ ಯೋಜನೆಯ ಕುರಿತು ವ್ಯಾಪಾರಸ್ಥರು ಹಾಗೂ ನಾಗರೀಕರೊಂದಿಗೆ ಸಮಾಲೋಚನೆ ಸಭೆ ಸಂಘಟಿಸಲಾಯಿತು. ಸದರಿ ಸಭೆಯಲ್ಲಿ ಪಾಲಿಕೆಯ ಪೂಜ್ಯ ಮಹಾಪೌರರು ಹಾಗೂ ವಾರ್ಡ ಸದಸ್ಯರಾದ ಶ್ರೀ ಡಿ.ಕೆ. ಚವ್ಹಾಣ, ಪಾಲಿಕೆಯ ಆಯುಕ್ತರಾದ ಮೇಜರ್. ಸಿದ್ದಲಿಂಗಯ್ಯಾ ಎಸ್. ಹಿರೇಮಠ, ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್, ಪಿಡಬ್ಲ್ಯೂಸಿ ಸಂಸ್ಥೆಯ ಪರಿಣಿತ ತಜ್ಞರು, ವಲಯ ಕಚೇರಿ ಸಹಾಯಕ ಆಯುಕ್ತರು ಹಾಗೂ ಸಿಬ್ಬಂದಿಗಳು ಮತ್ತು ಜನತಾ ಬಜಾರ ಮಾರುಕಟ್ಟೆಯ ವ್ಯಾಪಾರಸ್ಥರು ಹಾಗೂ ವ್ಯಾಪಾರಸ್ಥರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳು ಬಾಗವಹಿಸಿದ್ದರು.

ಪ್ರಾರಂಭದಲ್ಲಿ ಸ್ಮಾರ್ಟಸಿಟಿ ಯೋಜನೆ ಹಾಗೂ ಜನತಾ ಬಜಾರ ಮಾರುಕಟ್ಟೆ ಅಭಿವೃದ್ದಿ ಕುರಿತು ಪ್ರಾಸ್ತಾವಿಕವಾಗಿ ಪಾಲಿಕೆಯ ಆಯುಕ್ತರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್, ಹುಬ್ಬಳ್ಳಿ ಮೇಜರ್. ಸಿದ್ದಲಿಂಗಯ್ಯಾ ಎಸ್. ಹಿರೇಮಠ ಇವರು ಮಾತನಾಡಿ ಜನತಾ ಬಜಾರ ಅಭಿವೃದ್ದಿಯಲ್ಲಿ ಉತ್ತಮ ಕಟ್ಟಡ, ಉತ್ತಮ ವಾತಾವರಣ ನಿರ್ಮಾಣವಾಗಿ ವ್ಯಾಪಾರ ವೃದ್ದಿಯಾಗಿ ಆರ್ಥಿಕ ಬಲಪಡಿಸಲು ಅನುಕೂಲವಾಗುತ್ತದೆ ಈ ದಿಶೆಯಲ್ಲಿ ವ್ಯಾಪಾರಸ್ಥರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ತಿಳಿಸಿದರು. ಈ ದಿಶೆಯಲ್ಲಿ ವ್ಯಾಪಾರಸ್ಥರು ತಮ್ಮ ಎಲ್ಲ ರೀತಿಯ ಸಹಕಾರವನ್ನು ಪಾಲಿಕೆಗೆ ಹಾಗೂ ಸ್ಮಾರ್ಟಸಿಟಿ ಸಂಸ್ಥೆಗೆ ನೀಡಬೇಕೆಂದು ಕೋರಿದರು. ಈ ದಿಶೆಯಲ್ಲಿ ವ್ಯಾಪಾಸ್ಥರನ್ನು ಒಳಗೊಂಡು ಪ್ರತ್ಯೇಕ ಸಮಿತಿಯನ್ನು ರಚಿಸಿ ಆ ಸಮಿತಿಯಲ್ಲಿ ಎಲ್ಲ ಹಂತದ ಅಧಿಕಾರಿಗಳು ಮತ್ತು ಜನಪ್ರತಿನಿದಿಗಳನ್ನು ಅಳವಡಿಸಿ ಮುಕ್ತ ಚರ್ಚೆಯೊಂದಿಗೆ ಉತ್ತಮ ಯೋಜನೆಯನ್ನು ಅನುಷ್ಠಾನಗೊಳಿಸಲು ಸ್ಮಾರ್ಟ ವ್ಯಾಪಾರ ಹಾಗೂ ನಾಗರೀಕರ ಅವಶ್ಯಕತೆಗೆ ಅನುಗುಣವಾಗಿ ಜನತಾ ಬಜಾರ ಮಾರುಕಟ್ಟೆಯನ್ನು ಅಭಿವೃದ್ದಿಪಡಿಸೋಣ. ಪಾಲಿಕೆಯ ಮಹಾಪೌರರು ಮಾತನಾಡಿ ಎಲ್ಲ ವ್ಯಾಪಾಸ್ಥರಿಗೆ ಪ್ರಸ್ತುತ ಇರುವ ಪ್ರದೇಶದಲ್ಲಿ ಪುನಃ ವ್ಯಾಪಾರ ಕಟ್ಟೆಗಳನ್ನು ಹಂಚಿಕೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಇದ್ದಂತಹ ವ್ಯಾಪಾರಸ್ಥರನ್ನು ಬದಲಿಸಲು ಅವಕಾಶ ನೀಡುವುದಿಲ್ಲ ಪರ್ಯಾಯ ವ್ಯವಸ್ಥೆಗೆ ವಿಶೇಷ ಕಾರ್ಯಸೂಚಿಯನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ರೂಪಿಸಿ ತಮ್ಮ ಸಹಮತಿಯೊಂದಿಗೆ ವ್ಯವಸ್ಥೆ ಮಾಡುವುದಾಗಿ ಮತ್ತು ಯೋಜನೆಯನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸುವಂತೆ ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಲಾಗುವುದು. ಯಾವುದೇ ಕಾರಣಕ್ಕೂ ವ್ಯಾಪಾರಸ್ಥರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿದರು. ಪಿಡಬ್ಲ್ಯೂಸಿ ಸಂಸ್ಥೆಯಿಂದ ಅಭಿವೃದ್ದಿ ಯೋಜನೆಯ ಪರಿಕಲ್ಪನೆಯನ್ನು ತಿಳಿಸಲಾಯಿತು.

ಪ್ರಸ್ತುತ ಅಭಿವೃದ್ದಿ ಪರಿಕಲ್ಪನೆಯಲ್ಲಿ 2016 ಚ.ಮೀ ಕ್ಷೇತ್ರದ ಕೆಳಮಹಡಿಯಲ್ಲಿ ವ್ಯಾಪಾರಸ್ಥರ ವಾಹನ ನಿಲುಗಡೆಗೆ ಅವಕಾಶ, 2016 ಚ.ಮೀ ಕ್ಷೇತ್ರದ ನೆಲಮಹಡಿಯಲ್ಲಿ 170 ವ್ಯಾಪಾರ ಕಟ್ಟೆಗಳು, 2016 ಚ.ಮೀ ಕ್ಷೇತ್ರದ ಮೊದಲನೆ ಮಹಡಿಯಲ್ಲಿ 170 ವ್ಯಾಪಾರ ಕಟ್ಟೆಗಳು, ಒಟ್ಟು 6048 ಚ.ಮೀ ಕ್ಷೇತ್ರದಲ್ಲಿ ರೂಪರೇಶೆಗಳನ್ನು ತಯಾರಿಸಿ ಸದರಿ ಕಟ್ಟಡದಲ್ಲಿ ರೂಫ್-ಟಾಪ್ ಸೋಲಾರ, ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಆಧುನಿಕ ಕಟ್ಟಡಗಳಲ್ಲಿ ಇರುವಂತ ಇತರ ಸೌಲಭ್ಯಗಳನ್ನು ಇಲ್ಲಿ ಅಳವಡಿಸಿ ಅಂದಾಜು ರೂ. 18 ಕೋಟಿ ವೆಚ್ಚದಲ್ಲಿ ಅಂದಾಜು ಪತ್ರಿಕೆ ಮತ್ತು ನೀಲಿನಕ್ಷೆ ತಯಾರಿಸಿದೆ.

ಸಭೆಯಲ್ಲಿ ಬಾಗವಹಿಸಿದ ವ್ಯಾಪಾರಸ್ಥರಿಗೆ ಹಾಗೂ ಗೌರವಾನ್ವಿತ ಮಹಾಪೌರರು, ಆಯುಕ್ತರು ಹಾಗೂ ಅಧಿಕಾರಿ ಸಿಬ್ಬಂದಿಗಳಿಗೆ ಅಭಿನಂದಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸದರಿ ಸಭೆಗೆ ಅಂದಾಜು **350** ವ್ಯಾಪಾರಸ್ಥರು ಬಾಗವಹಿಸಿದ್ದರು. ಈ ವರದಿಯೊಂದಿಗೆ ಸಮಾಲೋಚನಾ ಸಭೆಯ ಫೋಟೋಗಳನ್ನು ಲಗತ್ತಿಸಿ ಕಳಿಸಲಾಗಿದೆ.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿ
ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ–ಮೇಲ್ :** sohdsmartcity@gmail.com

**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ವಿ.ಬಿ ಕಾಲೇಜ ಆವರಣ ವಿದ್ಯಾನಗರ, ಹುಬ್ಬಳ್ಳಿ